‘ಪಿಂಟೋ, ಆಗಲೇ ಎರಡು ತಾಸು ಆಯ್ತು...’ ಅಂದ. ‘ನಿಜ, ಆದರೆ ಅವರಿನ್ನೂ ಕ್ರಿಕೆಟ್ ಮ್ಯಾಚ್ ಆಡಿಲ್ಲ’ ಅಂತಂದೆ. ‘ಓ ಮೈ ಗಾಡ್, ಇನ್ನೂ ಕ್ರಿಕೇಟ್ ಮ್ಯಾಚ್ ಇದೆಯಾ...’ ಅಂದಿದ್ದ. (ನಗು)

ಈಗ ‘ಮುಗಲ್-ಎ-ಆಜಾಮ್’ ಸಿನಿಮಾವನ್ನು ನನ್ನ ವಿದ್ಯಾರ್ಥಿಗಳಿಗೆ ತೋರಿಸಿದರೆ, ಹಿಂದಿ ಮಾತೃಭಾಷೆಯ ಹುಡುಗರು ಆ ಸಿನಿಮಾ ಭಾಷೆ ಅರ್ಥವಾಗುವುದಿಲ್ಲ ಅನ್ನುತ್ತಾರೆ. ಈಗಿನ ಜನಕ್ಕೆ ವಿಪರೀತ ಸಮಯದ ಆತಂಕವಾಗಿ ಬಿಟ್ಟಿದೆ. ಪ್ರತಿ ಗಳಿಗೆಯನ್ನೂ ವೈಯಕ್ತಿಕ ಉಪಯೋಗವಾಗುವಂತೆ ಬಳಸಿಕೊಳ್ಳಬೇಕು ಅಂತಾರೆ. ನಾವು ನಮ್ಮ ಚಿತ್ರಗುಪ್ತರಾಗಿ ಬಿಟ್ಟಿದ್ದೇವೆ. ನಾನು ಯಾವಾಗಲೂ ‘ಏನಾದರೂ ಓದುತ್ತಿರಿ, ಅದರಿಂದ ಲಾಭವಿದೆ’ ಎಂದು ಹೇಳುತ್ತಲೇ ಇರುತ್ತೇನೆ. ಅದೇ ಅವರು ಬೇರೆ ಅರ್ಥದಲ್ಲಿ ನೋಡುತ್ತಿದ್ದಾರಾ ಅನ್ನಿಸುತ್ತೆ.

◆ **ಬಹುಶಃ ನಾವು ನಮ್ಮ ಯುವಜನತೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುತ್ತಿಲ್ಲ ಅನ್ನಿಸುತ್ತಾ? ಅವರಿಗೆ ಅವರದೇ ಆದ ಸೃಜನಶೀಲ ಸಂಗತಿಯ ನಿರ್ವಹಣೆಯ ಕ್ರಮಗಳು ಇರಬಹುದಲ್ಲವೆ? ಅವುಗಳು ನಮಗೆ ಸರಿಯಾಗಿ ಗೊತ್ತಿಲ್ಲ ಅನ್ನಿಸುತ್ತಾ?**

ಬಹುಶಃ ಅವರು ತಮ್ಮ ದೇಹದ ಮೂಲಕ ಸೃಜನಶೀಲತೆಯನ್ನು ನಮಗಿಂತಲೂ ಚೆನ್ನಾಗಿ ವ್ಯಕ್ತಪಡಿಸುತ್ತಿದ್ದಾರೆ ಅನ್ನಿಸುತ್ತೆ. ಹಾಡು ಕೇಳಿದರೆ ತಕ್ಷಣ ಎದ್ದು ಅದಕ್ಕೆ ನೃತ್ಯ ಮಾಡುವ ಶಕ್ತಿ ಅವರಿಗಿದೆ. ಈಗಲೂ ನನಗೆ ಅದು ಕಷ್ಟ. ಜೊತೆಗೆ ಸಾರ್ವಜನಿಕವಾಗಿ ತಮ್ಮನ್ನು ಹೇಗೆ ಪರಿಚಯಿಸಿಕೊಳ್ಳಬೇಕು ಎಂಬುದು ಅವರಿಗೆ ಗೊತ್ತಿದೆ. ತಮ್ಮದೇ ವೀಡಿಯೋ ಮಾಡಿ, ನಾನಿರುವುದು ಹೀಗೆ ಎಂದು ಧೈರ್ಯವಾಗಿ ಜಗತ್ತಿಗೆ ಹೇಳಿಕೊಳ್ಳುತ್ತಾರೆ.

◆ **ಸದ್ಯದ ಭಾರತೀಯ ಲೇಖಕ ಯಾವ ಸಮಸ್ಯೆಗಳನ್ನು ಎದುರಿಸುತ್ತಿದ್ದಾನೆ ಅನ್ನಿಸುತ್ತೆ?**

ಎಲ್ಲಾ ಕಾಲಕ್ಕೂ ಸಾಹಿತಿಗಳ ಸಮಸ್ಯೆ ಒಂದೇ, ತಮ್ಮನ್ನು ತಾವು ನಿರ್ವಹಿಸಿಕೊಳ್ಳುವುದು. ಈಗ ಒಂದು ವಿಶೇಷ ಸಂಗತಿಗೆ ಒತ್ತು ಕೊಡಲಾಗುತ್ತಿದೆ. ಲೇಖಕರು ಅತ್ಯಂತ ಧೈರ್ಯದಿಂದ ಮೌಲ್ಯಗಳಿಗಾಗಿ ಹೋರಾಡಬೇಕು ಎಂದು ಹೇಳುತ್ತಿದ್ದಾರೆ. ಆದರೆ ನಾವು ಕೇವಲ ಕತೆ ಹೇಳುವುದು ನಮ್ಮ ಧರ್ಮ ಅಂದುಕೊಂಡಿದ್ದೇವೆ. ನಾನು ಈಗ ಕ್ಯಾಥಲಿಕ್ ಆಗಿದ್ದು, ಹಿಂದೂ ಪಾತ್ರವೊಂದನ್ನು ಸೃಷ್ಟಿಸುತ್ತಿದ್ದೇನೆಂದರೆ ಯಾರೋ ಹಿಂದೆ ನಿಂತು ಗಮನಿಸುತ್ತಿದ್ದಾರೆ ಅನ್ನಿಸುತ್ತೆ. ‘ಏನು ಬರೀತಾ ಇದೀಯಾ?’ ಅಂತ ಜಬರಿಸಿದಂತೆ ಆದಾಗ ನಾನೇ ನನ್ನ ಕತೆಗೆ ಕತ್ತರಿ ಆಡಿಸುವ ಸೆನ್ಸಾರ್ ಮಂಡಳಿಯವನಾಗಿ ಬಿಡುತ್ತೇನೆ. ಬೆದರಿಕೆ ಬರುತ್ತಿರುವುದು ಅವರಿಂದಲ್ಲ, ನನ್ನೊಳಗಿಂದ ಅನ್ನಿಸುತ್ತೆ. ಆದರೆ ಒಂದು ಸಮಾಧಾನ ನಾನು ಮಾಡಿಕೊಳ್ಳುತ್ತಿರುತ್ತೇನೆ. ಯಾವಾಗಲೂ ಯಾರೋ ಒಬ್ಬರು ನಮ್ಮ ಬೆನ್ನ ಹಿಂದೆ ನಿಂತು ಪೊಲೀಸ್‌ಗಿರಿ ಮಾಡುತ್ತಲೇ ಇದ್ದರು. ಒಂದು ಕಾಲಕ್ಕೆ ಅದು ಚರ್ಚ್ ಆಗಿತ್ತು. ಅದು ನಮ್ಮ ಪುಸ್ತಕಗಳನ್ನು ಬ್ಯಾನ್ ಮಾಡುವಷ್ಟು ಶಕ್ತಿಯುತವಾಗಿತ್ತು. ಕೆಲವೊಮ್ಮೆ ದೊಡ್ಡ ದೊಡ್ಡ ಪುಸ್ತಕದಂಗಡಿಗಳು ನಮ್ಮ ಪುಸ್ತಕವನ್ನು

